**ಭಾರತೀಯ ರಿಸರ್ವ್ ಬ್ಯಾಂಕ್ ("ಆರ್‌ಬಿಐ") ನ ಸೂಚಿಸಲ್ಪಟ್ಟ ವಿವೇಕಯುತ ನಿಯದ ಪ್ರಕಾರ, ವೀಲ್ಸೆಮಿ ಪ್ರೈವೇಟ್ (ಕಂಪನಿ)ಯಿಂದ ಸಾಲ ಖಾತೆಯ ವಿಶೇಷ ನಮೂದಿತ ಖಾತೆ ("ಎಸ್ ಎಮ್ ಎ") ಅಥವಾ ಕಾರ್ಯನಿರ್ವಹಣೆಯಿಲ್ಲದ ಆಸ್ತಿ ("ಎನ್ ಪಿಎ") ಎಂದು ವರ್ಗೀಕರಣ.**

ಸಾಲ ಖಾತೆಯ ವಿಶೇಷ ನಮೂದಿತ ಖಾತೆ **("ಎಸ್ ಎಮ್ ಎ")** / ನಿರ್ವಹಣಾರಹಿತ ಆಸ್ತಿ **("ಎನ್ ಪಿ ಎ")** ಎಂಬ ವರ್ಗೀಕರಣವು ಸಾಲಗಾರನಿಂದ ಪಾವತಿಸಬೇಕಾದ ಯಾವುದೇ ಪಾವತಿ, ಅಸಲಿ ಅಂಶ ಮತ್ತು / ಅಥವಾ ಬಡ್ಡಿ ಅಂ ಒಳಗೊಂಡಂತೆ ಮಿರಿಮೀರಿದ ಅವಧಿಯನ್ನು ಅವಲಂಬಿಸಿರುತ್ತದೆ. ಈ ನಿಟ್ಟಿನಲ್ಲಿ ಸಾಲ ಪಡೆದ ಸಂದರ್ಭದಲ್ಲಿ ನಿಗದಿಗೊಳಿಸಿದ ಪಾವತಿಯ ಅಂತಿಮ ದಿನಾಂಕದಂದು ಮೊತ್ತ ಪಾವತಿಸದಿದ್ದರೆ ಅದನ್ನು ಮಿತಿಮೀರಿದ ಮೊತ್ತ ಎಂದು ಪರಿಗಣಿಸಲಾಗುತ್ತದೆ.

ಒಂದು ವೇಳೆ ಸಾಲದ ನಿಯಮ ಹಾಗೂ ಷರತ್ತಿನ ಪ್ರಕಾರ, ಈ ಒಪ್ಪಂದದಡಿಯಲ್ಲಿ ಸಂಪೂರ್ಣ ಅಥವಾ ಭಾಗಶಃ ಸಾಲದಲ್ಲಿ ನಿರ್ದಿಷ್ಟಪಡಿಸಿದ / ಸೂಚಿಸಿದ ದಿನಾಂಕದಂದು ಅಥವಾ ಮೊದಲು ಅಸಲು ಅಂಶ ಮತ್ತು /ಅಥವಾ ಬಡ್ಡಿ ಅಂಶ ಮತ್ತು /ಅಥವಾ ಇತರ ಯಾವುದೇ ಅನ್ವಯವಾಗುವ ಬಾಕಿಗಳನ್ನು ಪಾವತಿಸುವಲ್ಲಿ ಡಿಫಾಲ್ಟ್ ಆದರೆ ಅಂತಹ ಮಿತಿ ಮೀರಿದ ಸಾಲದ ಖಾತೆಯೊಂದಿಗೆ ಸಾಲಗಾರನು ಕಂಪನಿಯಿಂದ ಪಡೆದ ಎಲ್ಲಾ ಇತರ ಸಾಲ/ಕ್ರೆಡಿಟ್ ಸೌಲಭ್ಯಗಳನ್ನು ಆರ್ ಬಿ ಐ ನಿಯಂತ್ರಣದ ಪ್ರಕಾರ ಈ ಕೆಳಗಿನ ಪಟ್ಟಿಯಲ್ಲಿ ಸೂಚಿಸಿದಂತೆ ಎಸ್ ಎಮ್ ಎ ಅಥವಾ ಎನ್ ಪಿ ಎ ಎಂದು ವರ್ಗೀಕರಿಸಲಾಗುತ್ತದೆ.

| **ಮಿತಿಮೀರಿದ ಅವಧಿ** | **ವರ್ಗೀಕರಣ** |
|---|---|
| 30 ದಿನಗಳವರೆಗೆ | ಎಸ್ ಎಮ್ ಎ - 0 |
| 30 ದಿನಗಳಿಗಿಂತ ಹೆಚ್ಚು ಮತ್ತು 60 ದಿನಗಳವರೆಗೆ | ಎಸ್ ಎಮ್ ಎ -1 |
| 60 ದಿನಗಳಿಗಿಂತ ಹೆಚ್ಚು ಮತ್ತು 90 ದಿನಗಳವರೆಗೆ | ಎಸ್ ಎಮ್ ಎ -2 |
| 90 ದಿನಗಳಿಗಿಂತ ಹೆಚ್ಚು | ಎನ್ ಪಿ ಎ* |

*** ಎನ್ ಪಿ ಎ ಗಳೆಂದು ವರ್ಗೀಕರಿಸಲಾದ ಖಾತೆಗಳ ಉನ್ನತೀಕರಣ** - ಒಂದೊಮ್ಮೆ ಸಾಲ ಖಾತೆಯು ಎನ್ ಪಿ ಎ ಎಂದು ವರ್ಗೀಕರಿಸಿದ ನಂತರ ಸಾಲಾಗಾರನು ಬಾಕಿ ಪಾವತಿಸಬೇಕಾದ ಅಸಲು, ಬಡ್ಡಿ ಮತ್ತು ಇತರ ಯವುದೇ ಬಾಕಿ ಮೊತ್ತನ್ನು ಹಾಗೂ ಬಾಕಿ ಉಳಿಕೆ ಮೊತ್ತವನ್ನು ಪಾವತಿಸಿದ ನಂತರವಷ್ಟೇ ಅದನ್ನು ಉನ್ನತೀಕರಿಸಲಾಗುತ್ತದೆ.

***ಸುಲಭ ಉಲ್ಲೇಖಕ್ಕಾಗಿ ಸಾಗಾರನ ಖಾತೆಯನ್ನು ಎಸ್ ಎಮ ಎ /ಎನ್ ಪಿ ಎ ಎಂದು ವರ್ಗೀಕರಿಸಲು ವಿವರಣೆ*** *(ಇಲ್ಲಿ ನಮೂದಿಸಲದ ದಿನಾಂಕಗಳು ಕೇವಲ ವಿವರಣೆಯ ಉದ್ದೇಶಕ್ಕಾಗಿ ಮಾತ್ರ) ಸಾಲ ಖಾತೆಯ ಮರುಪಾವತಿಯ ಅಂತಿಮ ದಿನಾಂಕವು ಏಪ್ರಿಲ್ 08 202- ಆಗಿದ್ದರೆ ಮತ್ತು ಪಾವತಿಯನ್ನು ಕಂಪನಿಯು ದಿನದ ಮೊದಲು ಸ್ವೀಕರಿಸದಿದ್ದರೆ ಅಂತ್ಯ ಪ್ರಕ್ರಿಯೆಯು ನಡೆಯುತ್ತದೆ ನಂತರ ಎಸ್ ಎಮ್ ಎ /ಎನ್ ಪಿ ಎ ಸೂಚಕದ ವರ್ಗೀಕರಣವು ಈ ಕೆಳಗಿನಂತಿರುತ್ತದೆ:*

| ***ಅಸಲು/ಬಡ್ಡಿ /ಇತರ /ಯಾವುದೇ ಮೊತ್ತದ ಮಿತಿಮೀರಿದ ಅವಧಿ*** | ***ಎಸ್ ಎಮ್ ಎ/ಎನ್ ಪಿ ಎ ವರ್ಗೀಕರಣ ವಿಭಾಗ*** | ***ಎಸ್ ಎಮ್ ಎ/ಎನ್ ಪಿ ಎ ವರ್ಗೀಕರಣ ದಿನಾಂಕ*** |
|---|---|---|
| *30 ದಿನಾಂಕದವರೆಗೆ* | ಎಸ್ ಎಮ್ ಎ - 0 | *ಏಪ್ರಿಲ್ 08 202X* |
| *30 ದಿನಗಳಿಗಿಂತ ಹೆಚ್ಚು ಮತ್ತು 60 ದಿನಗಳವರೆಗೆ* | ಎಸ್ ಎಮ್ ಎ -1 | *ಮೇ 08 202X* |
| *60 ದಿನಗಳಿಗಿಂತ ಹೆಚ್ಚು ಮತ್ತು 90 ದಿನಗಳವರೆಗೆ* | ಎಸ್ ಎಮ್ ಎ -2 | *ಜೂನ್ 07 202X* |
| *90 ದಿನಗಳಿಂದ ಮೇಲೆ* | ಎನ್ ಪಿ ಎ | *ಜುಲೈ 07 202X* |

*# ಅ ಎಸ್ ಎಮ್ ಎ /ಎನ್ ಪಿ ಎ ದಿನಾಂಕವು ಆ ಕ್ಯಾಲೆಂಡರ್ ದಿನಾಂಕದ ದಿನದ ಅಂತ್ಯದಲ್ಲಿ ಸಾಲದ ಖಾತೆಯ ಆಸ್ತಿ ವರ್ಗೀಕರಣ ಸ್ಥಿತಿಯನ್ನು ಪ್ರತಿಬಿಂಬಿಸುತ್ತದೆ.*

*ಒಂದು ವೇಳೆ ಸಾಲ ಖಾತೆಯ ಬಾಕಿ ಪಾವತಿ ದಿನಾಂಕವು 08ನೇ ಏಪ್ರಿಲ್ 202X ಆಗಿದ್ದು, ಮತ್ತು ಸಂಪೂರ್ಣ ಬಾಕಿ ಕಂಪನಿಯಿಂದ ನಿಗದಿತ ದಿನಂಕದಂದು ಅಥವಾ ಅದರ ಮುಂಚಿತವಾಗಿ ಸ್ವೀಕಾರವಾಗದಿದ್ದಲ್ಲಿ ಆಗ ಬಾಕಿ ಉಳಿಕೆ ದಿನಾಂಕವು 08ನೇ ಏಪ್ರಿಲ್ 202X ಆಗಿರುತ್ತದೆ ಮತ್ತು ಈ ಖಾತೆಯನ್ನು* ***ಎಸ್ ಎಮ್ ಎ -0 ಎಂದು ಟ್ಯಾಗ್*** *ಮಾಡಲಾಗುತ್ತದೆ.*

*ಒಂದು ವೇಳೆ ಸಾಲ ಖಾತೆಯು ಬಾಕಿ ಉಳಿದು ಅಂದರೆ 30 ದಿನಗಳವರೆಗೆ ಬಾಕಿಯಾಗಿ ಮುಂದುವರೆದಾಗ ಈ ಖಾತೆಯನ್ನು ಮೇ 08 -202X ರಂದು* ***ಎಸ್ ಎಮ್ ಎ -1 ಎಂದು ಟ್ಯಾಗ್*** *ಮಾಡಲಾಗುತ್ತದೆ. ಆ ಖಾತೆಯನ್ನು ಎಸ್ ಎಮ್ ಎ -1 ಎಂದು ವರ್ಗೀಕರಿಸಲು ದಿನಾಂಕ ಮೇ 08 202X ಆಗಿರುತ್ತದೆ.*

*ಒಂದು ವೇಳೆ ಸಾಲದ ಖಾತೆಯು ಬಾಕಿ ಉಳಿದು ಅಂದರೆ, 60 ದಿನಗಳವರೆಗೆ ನಿರಂತರವಾಗಿ ಬಾಕಿಯಾಗಿ ಉಳಿದು ಮುಂದುವರೆದಾಗ ಜೂನ್ 07, 202X ಗೆ ಅದನ್ನು* ***ಎಸ್ ಎಮ್ ಎ-2 ಎಂದು ಟ್ಯಾಗ್*** *ಮಾಡಲಾಗುತ್ತದೆ. ಆ ಖಾತೆಯನ್ನು ಎಸ್ ಎಮ್ ಎ -2 ಎಂದು ವರ್ಗೀಕರಿಸಲು ದಿನಾಂಕ ಜೂನ್ 07, 202X ಆಗಿರುತ್ತದೆ.*

*ಅದೇ ರೀತಿ, ಒಂದು ವೇಲೆ ಸಾಲ ಖಾತೆಯು ಮತ್ತಷ್ಟು ಬಾಕಿ ಉಳಿದಿದ್ದು, ಜುಲೈ 07, 202X ರ ಅಂತ್ಯದವರೆಗೆ ಮುಂದುವರೆದಾಗ ಅದನ್ನು ಎನ್ ಪಿ ಎ ಎಂದು ವರ್ಗೀಕರಿಸಲಾಗುತ್ತದೆ.*

**ಸ್ವೀಕರಿಸಲಾಗಿದೆ, ಓದಲಾಗಿದೆ ಮತ್ತು ಅರ್ಥಮಾಡಿಕೊಳ್ಳಲಾಗಿದೆ.**